## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 181 (ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾಯಿತೆ ಪ್ರಶ್ನೆ) |
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 14-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಳಗಾವಿ ನಗರ ಉತ್ತರ ಕರ್ನಾಟಕ ಜನದಟ್ಟಣೆಯ ನಗರವಾಗಿದ್ದು ಕರ್ನಾಟಕ ದಕ್ಷಿಣ-ಉತ್ತರ ಭಾಗ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಗೆ ಸಂಪರ್ಕಿಸುವ ಭಾಗವಾಗಿದ್ದು ವಾಹನ ಸಂಚಾರದ ಒತ್ತಡವನ್ನು ಸರ್ಕಾರ ಮನ್ನಿಸಲಾಗಿದೆಯೇ; | ಹೌದು, ಬೆಳಗಾವಿ ನಗರದಲ್ಲಿ ವಾಹನ ದಟ್ಟಣೆಯನ್ನು ಗಮನಿಸಿ ಈ ನಗರಕ್ಕೆ ವರ್ತುಲ ರಸ್ತೆ ನಿರ್ಮಾಣ ಮಾಡಲು ಕ್ರಮ ವಹಿಸಲಾಗಿದೆ. ಸದರಿ ರಸ್ತೆ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ರವರ ವತಿಯಿಂದ ಕೈಗೊಳ್ಳಲಾಗುತ್ತಿದೆ. NHAI ವತಿಯಿಂದ ನೀಡಿರುವ ಕಾಮಗಾರಿಯ ಪ್ರಸ್ತುತ ಹಂತದ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ. |
| ಆ) | ಬೆಳಗಾವಿ ನಗರಕ್ಕೆ ರಿಂಗ್ ರೋಡ್ ಯಾವಾಗ ಮಂಜೂರಾಗಿದೆ ಮತ್ತು ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; | ಬೆಳಗಾವಿ ನಗರಕ್ಕೆ ವರ್ತುಲ ರಸ್ತೆ ನಿರ್ಮಾಣದ ಯೋಜನೆಯ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ದಿನಾಂಕ: 14.10.2017 ರಲ್ಲಿ M/s Unihorn India Pvt. Ltd. (Now Antea India Pvt. Ltd.) ಸಮಾಲೋಚಕರನ್ನು ನೇಮಿಸಲಾಗಿತ್ತು. ಇಲ್ಲಿಯವರೆಗೆ ಯೋಜನಾ ವರದಿ ತಯಾರಿಸಲು ರೂ.1.61 ಕೋಟಿ ವೆಚ್ಚ ಮಾಡಲಾಗಿದೆ ಎಂದು NHAI ರವರು ವರದಿಸಿರುತ್ತಾರೆ. |
| ಇ) | ಈ ರಿಂಗ್ ರೋಡ್ ಇಲ್ಲಿಯವರೆಗೆ ಪ್ರಗತಿ ಸಾಧಿಸದೆ ಇದ್ದರೂ ಸಹ ರಿಂಗ್ ರೋಡ್‌ಗಾಗಿ ಸ್ವಾಧೀನಪಡೆದಿರುವ ಜಮೀನುಗಳ ವಿಸ್ತೀರ್ಣ ಎಷ್ಟು; ರಿಂಗ್ ರೋಡ್ ಮಂಜೂರು ಆದೇಶ ಮತ್ತು ಸಂಬಂಧಪಟ್ಟ ಪೂರ್ಣ ಮಾಹಿತಿ ಒಗಿಸುವುದು? | ಈ ಯೋಜನೆಯ ರಸ್ತೆ ನಿರ್ಮಾಣ ಕೈಗೆತ್ತಿಕೊಳ್ಳುವ ಪೂರ್ವದಲ್ಲಿಯೇ ಭೂಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಿದ್ದು, ಅದರಂತೆ, 510.84 ಹೆಕ್ಟೇರ್ ಭೂಸ್ವಾಧೀನಕ್ಕಾಗಿ 3(A) ಅಧಿಸೂಚನೆ ಸಂಖ್ಯೆ:SO 4280 ದಿನಾಂಕ: 13.09.2022 ರಲ್ಲಿ ಅನುಮೋದನೆಯಾಗಿದೆ. ಅಸಿಸ್ಟೆಂಟ್ ಕಮಿಷನರ್ ಮತ್ತು ಸಕ್ಷಮ ಭೂಸ್ವಾಧೀನಾಧಿಕಾರಿಗಳು, ಬೆಳಗಾವಿರವರಿಂದ 3(D) ಅಧಿಸೂಚನೆ ತಯಾರಿ ಕಾರ್ಯ ಪ್ರಗತಿಯಲ್ಲಿದೆ ಎಂದು NHAI ರವರು ವರದಿಸಿರುತ್ತಾರೆ. |
| ಈ) | ರಿಂಗ್ ರೋಡ್ ಇಲ್ಲಿಯವರೆಗೆ ಸಂಪೂರ್ಣಗೊಳ್ಳದಿರುವುದಕ್ಕೆ ಕಾರಣಗಳೇನು; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಭೂಸ್ವಾಧೀನ ಸಮಿತಿ ನಿರ್ದೇಶಕ ತತ್ವಗಳ ಪ್ರಕಾರ ಬೈಪಾಸ್ ಅಥವಾ ರಿಂಗ್ ರಸ್ತೆಗಳ ನಿರ್ಮಾಣದ ಭೂಸ್ವಾಧೀನದ ವೆಚ್ಚದ 50% ಭಾಗವನ್ನು ರಾಜ್ಯ ಸರ್ಕಾರ ಭರಿಸಬೇಕಿರುತ್ತದೆ. ಅದರಂತೆ, ಬೆಳಗಾವಿ ರಿಂಗ್ ರಸ್ತೆ ನಿರ್ಮಾಣದ ಭೂಸ್ವಾಧೀನದ ಪ್ರಸ್ತಾವನೆಯನ್ನು ದಿನಾಂಕ:29.10.2020 ರಲ್ಲಿ ಜರುಗಿದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ನವದೆಹಲಿ |
| ಉ) | ರಾಜ್ಯದ ಎರಡನೇ ರಾಜ್ಯಧಾನಿಯೆಂದು ಹೆಸರು ಪಡೆದಿರುವ ಬೆಳಗಾವಿಗೆ ಸಮಗ್ರ ರಿಂಗ್ ರೋಡ್ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? | |

| | | |
|---|---|---|
| | | ಪ್ರಧಾನ ಕಛೇರಿಯಲ್ಲಿ ಮಂಡಿಸಲಾಗಿದ್ದು, ಈ ಸಭೆಯ ನಿರ್ಣಯದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪತ್ರ ಸಂಖ್ಯೆ:09.11.2020 ಮತ್ತು 10.09.2021 ರ ಕೋರಿಕೆಯಂತೆ ರಾಜ್ಯ ಸರ್ಕಾರ ದಿನಾಂಕ:04.06.2021ರ ಪತ್ರದಲ್ಲಿ 50% ಭೂಸ್ವಾಧೀನ ವೆಚ್ಚ ರೂ.280.00 ಕೋಟಿಗಳ ಅರ್ಧ ಭಾಗ ರೂ.140.00 ಕೋಟಿಗಳನ್ನು ನೀಡುವುದಾಗಿ ಒಪ್ಪಿಗೆ ಸಲ್ಲಿಸಿತ್ತು.<br>ರಾಜ್ಯ ಸರ್ಕಾರದ ಒಪ್ಪಿಗೆ ಮೇಲೆ ದಿನಾಂಕ: 23.08.2021 ರಲ್ಲಿ ಮತ್ತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ನವದೆಹಲಿಯ ಭೂಸ್ವಾಧೀನ ಸಮಿತಿ ಸಭೆಯಲ್ಲಿ ಮಂಡಿಸಲಾಗಿತ್ತು. ಸಭೆಯಲ್ಲಿ ಎಲ್ಲಾ ಅಂಶಗಳ ಚರ್ಚೆ ಬಳಿಕ ಭೂಸ್ವಾಧೀನಕ್ಕಾಗಿ ಪರಿಷ್ಕೃತ ಯೋಜಿತ ಮೊತ್ತವು ರೂ.532.00 ಕೋಟಿಗಳಾಗಿದ್ದು, ಸದರಿ ವಿಷಯವನ್ನು ದಿನಾಂಕ:10.09.2021 ರಲ್ಲಿ ರಾಜ್ಯ ಸರ್ಕಾರಕ್ಕೆ ತಿಳಿಸಲಾಗಿತ್ತು. ಸರ್ಕಾರ ದಿನಾಂಕ:25.01.2022ರಲ್ಲಿ ಯೋಜನೆ ಇನ್ನೂ DPR ಹಂತದಲ್ಲಿರುವುದರಿಂದ ಮತ್ತು ಭೂಸ್ವಾಧೀನಾಧಿಕಾರಿಗಳು ಮತ್ತು ಅಸಿಸ್ಟೆಂಟ್ ಕಮಿಷನರ್, ಬೆಳಗಾವಿ ರವರು ಭೂಸ್ವಾಧೀನ ಕಾರ್ಯದ ಅವಾರ್ಡ್ ಮಾಡಿದ ನಂತರ ಅಂತಿಮಗೊಳಿಸುವ ಒಟ್ಟು ಮೊತ್ತವನ್ನು ನಂತರ ರಾಜ್ಯ ಸರ್ಕಾರದಿಂದ ಪರಿಗಣಿಸಿ ಅನುದಾನ ಬಿಡುಗಡೆ ಗೊಳಿಸುವುದಾಗಿ ತಿಳಿಸಲಾಗಿದೆ. ಈ ಒಪ್ಪಿಗೆ ಆಧಾರದಲ್ಲಿ ಪ್ರಸ್ತುತ ದಿನಾಂಕ: 13.09.2022 ರಲ್ಲಿ 3(A) ಅಧಿಸೂಚನೆ ಅನುಮೋದನೆಯಾಗಿದೆ, 3(D) ಪ್ರಗತಿಯಲ್ಲಿದೆ ಮತ್ತು ಯೋಜನೆ ವರದಿ ತಯಾರಿಕೆ ಮುಕ್ತಾಯದ ಹಂತ ತಲುಪಿದ್ದು, ಶೀಘ್ರದಲ್ಲಿಯೇ ಕಾಮಗಾರಿಗೆ ಟೆಂಡರ್ ಕರೆಯಲಾಗುವುದೆಂದು NHAI ರವರು ವರದಿಸಿರುತ್ತಾರೆ. 34.480 ಕಿ.ಮೀ ಕಾಮಗಾರಿಗೆ (ಪ್ಯಾಕೇಜ್ 1A) ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ.<br>ಪ್ರಸ್ತುತ ಬೆಳಗಾವಿ ನಗರಕ್ಕೆ ರಾಷ್ಟ್ರೀಯ ಹೆದ್ದಾರಿ-4A ಕಿ.ಮೀ. 11.00 ರಿಂದ ರಾಷ್ಟ್ರೀಯ ಹೆದ್ದಾರಿ-4ರ ಕಿ.ಮೀ.516 ರಲ್ಲಿ ಕೂಡುವ 4/6 ಪಥದ (ಸುಮಾರು 34.480 ಕಿ.ಮೀ ಪ್ಯಾಕೇಜ್ 1A) ವರ್ತುಲ ರಸ್ತೆ ನಿರ್ಮಾಣಕ್ಕಾಗಿ ದಿನಾಂಕ:02.01.2023 ರಂದು ಟೆಂಡರ್ ಕರೆಯಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 35 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು